


# ಅಂಗವೈಕಲ್ಯ ಆಸರೆಯಾಗಲಿ ಮನೋವೈಶಾಲ್ಯ

**ಅಂಗವಿಕಲರನ್ನು ಸಮಾಜ ಹಾಗೂ ವ್ಯವಸ್ಥೆ ಅನುಕಂಪದಿಂದ ಕಾಣುತ್ತದೆ. ಆದರೆ, ಅನುಕಂಪ ಬದುಕು ಕಟ್ಟಿಕೊಡುವುದಿಲ್ಲ. ಅಂಗವೈಕಲ್ಯದ ಬಾಧೆಗೊಳಗಾದವರಿಗೆ ಸಮಾಜದ ಸಹಾನುಭೂತಿಗಿಂತಲೂ ಮುಖ್ಯವಾದುದು ಅವಕಾಶ. ದುರದೃಷ್ಟವಶಾತ್, ಬಹುತೇಕ ಸಂದರ್ಭಗಳಲ್ಲಿ ನಮ್ಮ ಸ್ಪಂದನ ಅನುಕಂಪದಲ್ಲಿ ಕೊನೆಗೊಳ್ಳುವುದೇ ಹೊರತು, ಅವಕಾಶಗಳಾಗಿ ರೂಪುಗೊಳ್ಳುವುದಿಲ್ಲ. ಅಂಗವೈಕಲ್ಯಕ್ಕೆ ತುತ್ತಾದವರಿಗೆ ಉದ್ಯೋಗದಲ್ಲಿ ಮೀಸಲು ಇದೆಯಾದರೂ, ಆ ಸವಲತ್ತನ್ನು ಪಡೆಯಲು ಕಾನೂನು ಗೋಜಲುಗಳಿವೆ. ಕೆಲವು ಸಂದರ್ಭಗಳಲ್ಲಿ ನ್ಯಾಯಾಲಯಗಳೇ ಮಧ್ಯಪ್ರವೇಶಿಸಿ ಅಂಗವಿಕಲರಿಗೆ ನ್ಯಾಯ ದೊರಕಿಸಿಕೊಟ್ಟಿರುವುದಿದೆ. ಅಂಗವಿಕಲರಿಗೆ ಒದಗಿಸಬೇಕಾದ ಅವಕಾಶಗಳ ಕುರಿತು ಚರ್ಚಿಸುವ ಈ ಬರಹ - ಸಮಾಜ, ವ್ಯವಸ್ಥೆ ಹಾಗೂ ಕಾನೂನು ಇನ್ನಷ್ಟು ಮಾನವೀಯಗೊಳ್ಳಬೇಕಾದ ಅಗತ್ಯವನ್ನು ಪ್ರತಿಪಾದಿಸುತ್ತಿದೆ.**

■ ಗುರುರಾಜ್ ಎಸ್‌. ದಾವಣಗೆರೆ